ಶ್ರೀ ಆರ್.ಎನ್.ನಾಯಕ್ : ಮಾನ್ಯ ಅಧ್ಯಕ್ಷರೇ, ನಾನು ಭಟ್ಕಳದ ವಿಚಾರವನ್ನು ಪ್ರಸ್ತಾಪ ಮಾಡಬೇಕಾಗಿದೆ.

ಅಧ್ಯಕ್ಷರು : - ತಾವು ಕುಳಿತುಕೊಳ್ಳಿ.

ವಿಷಯ : - (i) ನಿಯಮ 326 ರ ಪ್ರಕಾರ ಸದನದಲ್ಲಿ ಓದಿದ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುವ ಬಗ್ಗೆ : - (ii) ಖಾಸಗೀ ಕಾರ್ಯಕಲಾಪಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳುವ ಬಗ್ಗೆ : -

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : - ಮಾನ್ಯ ಅಧ್ಯಕ್ಷರೇ, ನಾನು ಮೊದಲನೆಯದಾಗಿ ಆಗಲೇ ಪ್ರಸ್ತಾಪ ಮಾಡಿದ್ದು ಬಹಳ ಮುಖ್ಯವಾದ ವಿಚಾರ. ಯಾರಾದರೂ ಒಬ್ಬರು ಮಂತ್ರಿಗಳು ತಮ್ಮ ಉತ್ತರದಲ್ಲಿ ಕಾಗದಪತ್ರಗಳ ಒಂದು ಭಾಗವನ್ನು ಸಭೆಯಲ್ಲಿ ಉತ್ತರಿಸಿ ಕೋಟ್ ಮಾಡಿದರೆ ಆ ಪತ್ರದ ಪೂರ್ಣ ಪಾಠವನ್ನು ಸಭೆಯ ಮುಂದಿಡಬೇಕು. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ವಸತಿ ಸಚಿವರು ಸಿಓಡಿ ಎನ್‌ಕ್ಯೂಯಿರಿಯ ಒಂದು ಭಾಗವನ್ನು ಮಾನ್ಯ ಚಂದ್ರೇಗೌಡರು ಕೇಳಿದಂತಹ ಪ್ರಶ್ನೆಗೆ ಉತ್ತರಿಸಿ ಏನು ಉತ್ತರವನ್ನು ಹೇಳಿದ್ದಾರೆ, ಅದರ ಪೂರ್ಣಪಾಠವನ್ನು ಈ ಸಭೆಯ ಮುಂದಿಡಬೇಕು. ನಿಯಮ 326ರ ಪ್ರಕಾರ ಇದು ಕಡ್ಡಾಯ. ಅವರು ಸಭೆಯ ಮುಂದಿಡುತ್ತಾರೋ ಇಲ್ಲವೋ ಎಂಬುದನ್ನು ನಮಗೆ ತಿಳಿಸಬೇಕು. ಅವರ ಅಭಿಪ್ರಾಯವನ್ನು ಕೇಳಿದ ನಂತರ ತಾವು ಅವರಿಗೆ ನಿರ್ದೇಶನ ಕೊಡಬೇಕೆಂದು ನಾನು ಮೊಟ್ಟ ಮೊದಲನೆಯದಾಗಿ ಹೇಳುತ್ತೇನೆ. ಇದು ನನ್ನ ಫಸ್ಟ್ ಪಾಯಿಂಟ್ ಆಫ್‌ಆರ್ಡರ್. ಎರಡನೆಯದಾಗಿ ಇವತ್ತಿನ ದಿವಸ ತಮ್ಮ ಗಮನಕ್ಕೆ ತರುವುದೇನೆಂದರೆ, ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮದ ಪ್ರಕಾರ ನಿಯದ 29ರ ಪ್ರಕಾರ ಇಂದು ಶುಕ್ರವಾರವಾದ ಕಾರಣ ಇವತ್ತು ಸಮಯವನ್ನು ಖಾಸಗೀ ಕಾರ್ಯಕಲಾಪಗಳಿಗೆ ನಿಗದಿ ಮಾಡಬೇಕಾಗಿದೆ. ನಮಗೆ ಗೊತ್ತಿಲ್ಲ, ಸಭೆ ಎಲ್ಲಿಯವರಗೆ ಮುಂದುವರೆಯುತ್ತದೆಂದು. ಆದರೆ ಸಭೆ ಮುಕ್ತಾಯವಾಗುವುದಕ್ಕೆ ಎರಡೂವರೆ ಗಂಟೆಗಳಿಗೆ ಮೊದಲು ನಾವೊಂದು ನಿಯಮವನ್ನು ಮಾಡಿಕೊಂಡಿದ್ದೇವೆ. ಖಾಸಗೀ ಕಾರ್ಯಕಲಾಪಗಳ ವಿಧೇಯಕಗಳು ಇರಬಹುದು ನಿರ್ಣಯಗಳು ಇರಬಹುದು ಅದಕ್ಕೆ ಕಡ್ಡಾಯವಾಗಿ ನಾವು ಸಮಯವನ್ನು ಮೀಸಲಾಗಿಡಬೇಕಾಗುತ್ತದೆ. ಇವತ್ತಿನ ದಿವಸ ಬೆಳಿಗ್ಗೆ ನಮಗೆ ಲಿಸ್ಟ್ ಆಫ್ ಬಿಸಿನೆಸ್ ಬಂದಾಗ ನಮಗೆ ಗೊತ್ತಾಯಿತು. ಅದಕ್ಕೋಸ್ಕರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ತಾವು ಅನುಮತಿಯನ್ನು ಕೊಡಲಿಲ್ಲ, ಈಗ ಕೊಟ್ಟಿದ್ದೀರಿ ತಮಗೆ ವಂದನೆಗಳು. ನಿಯಮ 29ರ ಪ್ರಕಾರ ಶುಕ್ರವಾರ ಕೊನೆಯ ಎರಡೂವರೆ ಗಂಟೆಗಳ ಕಾಲ ಖಾಸಗೀ ಕಾರ್ಯಕಲಾಪಗಳಿಗೆ ತಾವು ಸಮಯವನ್ನು ನಿಗದಿ ಮಾಡಲಿಲ್ಲ. ಇದು ಸರಿಯಲ್ಲ. ಈಗಾಗಲೇ ಖಾಸಗೀ ನಿರ್ಣಯಗಳು ತಮ್ಮ ಮುಂದಿವೆ. ನಾವು ಈಗಾಗಲೇ ಅರ್ಧಂಬರ್ಧ ಖಾಸಗೀ ನಿರ್ಣಯಗಳನ್ನು ಚರ್ಚೆ ಮಾಡಿದ್ದೇವೆ. ಈ ದಿಸೆಯಲ್ಲಿ ತಮಗಿರುವ ಅಧಿಕಾರ ಏನಿದೆ ಆ ಅಧಿಕಾರವನ್ನು ಚಲಾಯಿಸಿ ಇವತ್ತಿನ ದಿವಸ ಎಲ್ಲಾ ವಿಧವಾದಂಥ ಕಾರ್ಯಕಲಾಪಗಳನ್ನು ಮುಂದೂಡಿ ಇಂದು ಕಡೆಯ ಎರಡೂವರೆ ಗಂಟೆ ಏನಿದೆ ಅದನ್ನು ಖಾಸಗೀ ಕಾರ್ಯಕಲಾಪಗಳನ್ನು ಚರ್ಚೆಮಾಡಲು ಸಮಯವನ್ನು ನಿಗದಿ ಮಾಡಬೇಕೆಂದು ತಮ್ಮಲ್ಲಿ ಹೇಳುತ್ತೇನೆ ಈ ಬಗ್ಗೆ ನಿಯಮಗಳನ್ನು ಬೇಕಾದರೆ ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು:- ಅದು ಬೇಡ. ಮಾನ್ಯ ಸಾಂಡ್ರರವರೇ, ಅವರು ಹೇಳುವುದನ್ನು ತಾವು ಗಮನಿಸಬೇಕು. ಆ ವರದಿಯನ್ನು ಪಾರ್ಟ್ ಓದಿದ್ದನ್ನು ಸಭೆಯಲ್ಲಿ ಮಂಡಿಸುವ ಬಗ್ಗೆ ಅವರು ಕೇಳುತ್ತಿದ್ದಾರೆ.

ಶ್ರೀ ಎಚ್.ವಿಕಾಂತಯ್ಯ:- ಇವತ್ತು ಶುಕ್ರವಾರ ಇರುವುದರಿಂದ ಖಾಸಗಿ ಕಾರ್ಯಕಲಾಪಗಳಿಗೆ ಎರಡು ಗಂಟೆ ಕಾಲವನ್ನು ತಾವು ನಿಗದಿ ಮಾಡಬೇಕು. ಈಗಾಗಲೇ ಖಾಸಗಿ ನಿರ್ಣಯವನ್ನು ಶ್ರೀ ಬನ್ನಿಕೋಡ್ ಅವರು ಕಳುಹಿಸಿದ್ದಾರೆ. ಹಿಂದೆ ಶ್ರೀ ವಾಟಾಳ್ ನಾಗರಾಜ್ ಅವರು ನಿರ್ಣಯವನ್ನು ಕಳಿಸಿಕೊಟ್ಟಿದ್ದು ಅರ್ಧಂಬರ್ಧವಾಗಿ ಸಭೆಯ ಮುಂದಿದೆ. ಇವತ್ತಿನ ದಿವಸ ಬಿಸಿನೆಸ್‌ನಲ್ಲಿ ಅದನ್ನು ಸೇರಿಸದೇ ಇರುವುದರಿಂದ ಈಗಲೂ ಸಹ ತಮಗೆ ಅಧಿಕಾರ ಇದೆ. ತಮ್ಮ ಅಧಿಕಾರವನ್ನು ಚಲಾಯಿಸಿ ಎಲ್ಲ ಬಿಸಿನೆಸ್‌ನ್ನು ಮುಂದಕ್ಕೆ ಹಾಕಿ ಈ ಖಾಸಗಿ ಕಾರ್ಯಕಲಾಪವನ್ನು ಕಡೆಯ ಎರಡು ಗಂಟೆ ಕಾಲದಲ್ಲಿ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಿಯಮಗಳನ್ನು ಬೇಕಾದರೆ ತಮ್ಮ ಗಮನಕ್ಕೆ ತರುತ್ತೇನೆ. ನಿಯಮ 29, ಹಾಗೂ 71; 145ರ ಪ್ರಕಾರ ಖಾಸಗಿ ನಿರ್ಣಯವನ್ನು ಕೊಟ್ಟಿದ್ದೇವೆ. ಖಾಸಗಿ ನಿರ್ಣಯವನ್ನು ಕೊಟ್ಟಂಥ ಸಂದರ್ಭದಲ್ಲಿ ಕಾಲಾವಕಾಶ ಹಂಚಿಕೆ ರೀತಿಯಲ್ಲಿ ಏನಿದೆ ಆ ನಿಯಮಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ 244ನೇ ನಿಯಮದ ಮೇರೆಗೆ ಯಾವುದೇ ಸಮಿತಿಗೆ ಅಧಿಕಾರ ಇಲ್ಲ. ಆದ್ದರಿಂದ ಒಂದು ಪಕ್ಷ ತಾವು ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಮಾಡಿದೆ ಎನ್ನುವ ಮಾತನ್ನು ಹೇಳುವುದಾದರೆ ನಾನು ತಮ್ಮ ಗಮನಕ್ಕೆ ವಿನಮ್ರವಾಗಿ ತರುತ್ತಿದ್ದೇನೆ, ಅದಕ್ಕೆ ಅಧಿಕಾರ ಇಲ್ಲ. ಅದನ್ನು ನಾನು ಓದುತ್ತೇನೆ–

"...The expression "other business" referred to in this rule and rules 244 and 245 means business other than private members 'Bills under rule 74 and private members' resolution under rule 145."

ಆದ್ದರಿಂದ ಈ ಕಾರ್ಯಕಲಾಪಗಳಿಗೆ ಕಾಲಾವಕಾಶವನ್ನು ನಿಗದಿ ಮಾಡುವಂಥ ಅಧಿಕಾರ ಯಾರಿಗೂ ಇಲ್ಲ. ನಿಯಮದ ಪ್ರಕಾರ ಶುಕ್ರವಾರ ಕಡೆಯ ಎರಡೂವರೆ ಗಂಟೆಯಲ್ಲಿ ಇದನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಪಕ್ಷ ತಮ್ಮ ಕಚೇರಿಯಲ್ಲಿ ಏನಾದರೂ ತಪ್ಪಾಗಿದ್ದರೆ ಆ ತಪ್ಪನ್ನು ಸರಿಪಡಿಸುವಂಥ ಅಧಿಕಾರ ತಮಗೆ ಇರುವುದರಿಂದ ತಾವು ಇದಕ್ಕೆ ಕಾಲಾವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಆರ್. ಎನ್.ನಾಯಕ್:- ಅಧ್ಯಕ್ಷರೇ, ನಮ್ಮ ಭಟ್ಕಳದಲ್ಲಿ ಗಲಭೆ ಇದ್ದು ಜನ ಸಾಯುತ್ತಿದ್ದಾರೆ. ನಾನು ಮಾತನಾಡುವುದು ಬೇಡವೆಂದರೆ ಬಿಟ್ಟುಬಿಡುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್:- ಅದು ಬೇರೆ ವಿಷಯ. ಖಾಸಗಿ ನಿರ್ಣಯದ ಬಗ್ಗೆ ಅವಕಾಶ ಕೊಡಬೇಕು ಅಂತ ನಿಯಮದಲ್ಲಿದೆ. ತಾವು ಗಮನಿಸಿರಬಹುದು, ಕಳೆದ ಅನೇಕ ಅಧಿವೇಶನಗಳಲ್ಲಿ ಇದಕ್ಕೆ ಸಮಯವನ್ನೇ ಕೊಡುತ್ತಿಲ್ಲ. ಕೇವಲ ಸರ್ಕಾರಿ ಕಾರ್ಯಕಲಾಪ ಮಾತ್ರ ನಡೆಯುತ್ತಿದೆ. ಖಾಸಗಿ ವಿಧೇಯಕ, ಖಾಸಗಿ ನಿರ್ಣಯದ ಬಗ್ಗೆ ಈಗ ಸಮಯವನ್ನೇ ಕೊಡುತ್ತಿಲ್ಲ. ನಾನು ಕಳೆದ ನಾಲ್ಕು ವರ್ಷಗಳಿಂದ ಒಂದು ನಿರ್ಣಯವನ್ನು ಕಳಿಸುತ್ತಿದ್ದೇನೆ....

ಅಧ್ಯಕ್ಷರು:- ಸ್ವಲ್ಪ ಕೇಳಿ. ಮಾನ್ಯ ಸದಸ್ಯರು ಖಾಸಗಿ ಕಾರ್ಯಕಲಾಪದ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ಅದಕ್ಕೆ ಉತ್ತರ ಹೇಳುತ್ತೇನೆ. ಆಮೇಲೆ ತಮ್ಮದು ಯಾವುದಾದರೂ ಬಾಕಿ ಇದ್ದರೆ ಅದನ್ನು ವಿಚಾರ ಮಾಡೋಣ. ಮೊನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಕಾವೇರಿ ವಿಷಯದ ಬಗ್ಗೆ ಚರ್ಚೆ ನಡೆದ ಸಂಬಂಧದಲ್ಲಿ ಇವತ್ತಿನ ಖಾಸಗಿ ಕಾರ್ಯಕಲಾಪಗಳನ್ನು ಮುಂದೆ ಹಾಕಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದರಿಂದ ಇವತ್ತು ನಾವು ಕಾವೇರಿ ವಿಷಯದ ಬಗ್ಗೆ ಚರ್ಚೆಮಾಡಿ, ಮಧ್ಯಾಹ್ನ ಪ್ರಶ್ನೋತ್ತರ ಇವನ್ನೆಲ್ಲಾ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಏಕಾಂತಯ್ಯ:- ತಾವು ಖಾಸಗಿ ಕಾರ್ಯಕಲಾಪಗಳನ್ನು ಸಲಹಾ ಸಮಿತಿಯ ಆದೇಶದ ಮೇರೆಗೆ ತೆಗೆದುಕೊಳ್ಳಬೇಕಾಗಿಲ್ಲ. ಇದಕ್ಕೆ ನಾವು ಪ್ರತ್ಯೇಕ ನಿಯಮಗಳನ್ನು ಮಾಡಿಕೊಂಡಿದ್ದೇವೆ. ಆ ನಿಯಮಗಳಲ್ಲಿ 239 ಏನಿದೆ ಅದು ಸಮಿತಿಯ ರಚನೆ ಇರಬಹುದು, 241ರಲ್ಲಿ ಸಮಿತಿಯ ಪ್ರಕಾರಗಳು, ಫಂಕ್ಷನ್ಸ್ ಏನಿವೆ, ಅದರಲ್ಲಿ ಅವರಿಗೆ ಅಧಿಕಾರವನ್ನು ಕೊಟ್ಟಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಇದರಿಂದ ಹೊರತಾದ ಬಿಸಿನೆಸ್‌ನ್ನು ನಿಗದಿ ಮಾಡುವುದಕ್ಕೆ ಮಾತ್ರ ಅಧಿಕಾರ ಇದೆಯೇ ಹೊರತಾಗಿ ಖಾಸಗಿ ಕಾರ್ಯಕಲಾಪಗಳನ್ನು ನಿಗದಿ ಮಾಡುವಂಥ ಅಧಿಕಾರ ಈ ನಿಯಮಗಳ ಪ್ರಕಾರ ಇಲ್ಲ. ನಾನು ಅದರ ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿಗೆ ಆ ಅಧಿಕಾರ ಇದೆಯೇ ಇಲ್ಲವೇ? ಇಲ್ಲದೇ ಇದ್ದರೆ ಇವತ್ತಿನ ದಿವಸ ತಪ್ಪಾಗದ ರೀತಿಯಲ್ಲಿ ಏನಾದರೂ ಸರ್ಕಾರ ಮತ್ತು ತಮ್ಮ ಸಚಿವಾಲಯ ನೋಡಿಕೊಳ್ಳುತ್ತದೆಯೇ ಅಥವಾ ಇಲ್ಲವೇ?

MR.SPEAKER:- I will give my ruling. ಇನ್ನುಮುಂದೆ ಗಮನ ಸೆಳೆಯುವ ಸೂಚನೆ. ಶ್ರೀ ಬಸವರಾಜ ಪಾಟೀಲ್ ಅಟ್ಟೂರು ಅವರು....

ಶ್ರೀ ಎಂ.ಮಹದೇವ್:– ಅಧ್ಯಕ್ಷರೇ....

ಅಧ್ಯಕ್ಷರು:- ನೀವು ಕುಳಿತುಕೊಳ್ಳಿ.

ಶ್ರೀ ಎಂ.ಮಹದೇವ್:- ನಮ್ಮಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಮಳೆ ಇಲ್ಲ. ಈ ವಿಚಾರದ ಬಗ್ಗೆ ನಾನು ಮಾತನಾಡಬೇಕಾಗಿದೆ.

6. ಗಮನ ಸೆಳೆಯುವ ಸೂಚನೆಗಳು

ವಿಷಯ:ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವುದರಿಂದ ದ್ವಿಚಕ್ರ ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್(ಬಸವ ಕಲ್ಯಾಣ):- ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಹೆಲ್ಮೆಟ್ ಧರಿಸುವುದನ್ನು ಕಡ್ಡಾಯ ಮಾಡುವುದರಿಂದ, ದ್ವಿಚಕ್ರ ವಾಹನ ಚಾಲಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಮಾನ್ಯ ಸಾರಿಗೆ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ:-

ಶ್ರೀ ಡಿ.ಎ.ಚಿನ್ನಪ್ಪ (ಗಣಿ ಭೂ ವಿಜ್ಞಾನ ಸಚಿವರು):- ಮಾನ್ಯ ಅಧ್ಯಕ್ಷರೇ, ಸಾರಿಗೆ ಸಚಿವರ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಮೋಟಾರು ವಾಹನ ಕಾಯಿದೆ 1988ರ ಕಾಯಿದೆ 129ರ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ದ್ವಿಚಕ್ರ ವಾಹನಗಳನ್ನು ಓಡಿಸುವಂಥಹ ಚಾಲಕರು ಶಾಖ್ಬಿಕ ಹೆಲ್ಮೆಟ್‌ಗಳನ್ನು